



# "ಸಹಕಾರದ ಮೂಲಕ ಸಮೃದ್ಧಿ"

## ಸಹಕಾರ ಸಚಿವಾಲಯದ ಪ್ರಮುಖ ಉಪಕ್ರಮಗಳು

**(6th ಜುಲೈ 2021 - 14th ಜೂನ್ 2023)**

## (ಎ) ಪ್ರಾಥಮಿಕ ಸಹಕಾರ ಸಂಘಗಳ ಆರ್ಥಿಕ ಬಲವರ್ಧನೆ

### 1. ಪ್ರಾಥಮಿಕ ಸಂಘಗಳನ್ನುವಿವಿಧೋದ್ದೇಶ ಸಂಘಗಳನ್ನಾಗಿ ಮಾಡಲು ಮಾದರಿ ಉಪವಿಧಿಗಳು (ಬೈಲಾಗಳು)

ಪ್ರಾಥಮಿಕ ಸಹಕಾರ ಸಂಘಗಳಿಗಾಗಿ ಮಾದರಿ ಉಪ-ನಿಯಮಗಳನ್ನು (ಬೈಲಾ) ಸಹಕಾರ ಸಚಿವಾಲಯವು ಸಿದ್ಧಪಡಿಸಿದ್ದು ಎಲ್ಲಾ ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳು, ರಾಷ್ಟ್ರೀಯ ಒಕ್ಕೂಟಗಳು ಮತ್ತು ಇತರ ಮಧ್ಯಸ್ಥಗಾರರೊಂದಿಗೆ ಸಮಾಲೋಚಿಸಿದ ನಂತರ ಇದನ್ನು 05 ಜನವರಿ 2023 ರಂದು ವಿತರಿಸಲಾಗಿದೆ. ಇದು PACS/ LAMPS ನ ಆದಾಯದ ಮೂಲಗಳನ್ನು ಹೆಚ್ಚಿಸುತ್ತದೆ ಮತ್ತು ಹೈನುಗಾರಿಕೆ, ಮೀನುಗಾರಿಕೆ, ಸಂಗ್ರಹಣೆ ಮುಂತಾದ 25 ಕ್ಕೂ ಹೆಚ್ಚು ಹೊಸ

ವಲಯಗಳಲ್ಲಿ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ. ಇಲ್ಲಿಯವರೆಗೆ, ಅವುಗಳನ್ನು 23 ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳು ಅಳವಡಿಸಿಕೊಂಡಿವೆ ಮತ್ತು ಇತರ ರಾಜ್ಯಗಳಲ್ಲಿ ಅಳವಡಿಸಿಕೊಳ್ಳುವ ಕಾರ್ಯ ಪ್ರಗತಿಯಲ್ಲಿದೆ.

**2. ಗಣಕೀಕರಣದ ಮೂಲಕ ಪ್ರಾಥಮಿಕ ಸಹಕಾರ ಸಂಘಗಳ (ಪಿಎಸಿಎಸ್) ಬಲವರ್ಧನೆ**

ಒಂದೇ ರಾಷ್ಟ್ರೀಯ ತಂತ್ರಾಂಶ ಜಾಲದ (ಸಾಫ್ಟ್‌ವೇರ್ ನೆಟ್ವರ್ಕ್) ಮೂಲಕ ಒಟ್ಟು 63,000 ಕ್ರಿಯಾತ್ಮಕ ಪಿಎಸಿಎಸ್ / ಲ್ಯಾಂಪ್ಸ್‌ಗಳನ್ನು ನಬಾರ್ಡ್‌ನೊಂದಿಗೆ ಸಂಪರ್ಕಿಸಲಾಗುತ್ತಿದೆ. ಇಲ್ಲಿಯವರೆಗೆ, 24 ರಾಜ್ಯಗಳು ಮತ್ತು 4 ಕೇಂದ್ರಾಡಳಿತ ಪ್ರದೇಶಗಳಿಂದ ಒಟ್ಟು 58,383 ಪಿಎಸಿಎಸ್ ಗಳ ಗಣಕೀಕರಣದ ಪ್ರಸ್ತಾಪಗಳನ್ನು ಸ್ವೀಕರಿಸಲಾಗಿದೆ. ಇದಕ್ಕಾಗಿ ಯಂತ್ರಾಂಶ (ಹಾರ್ಡ್ ವೇರ್) ಖರೀದಿ, ಅಂಕೀಕರಣ (digitalisation) ಮತ್ತು ಬೆಂಬಲ ವ್ಯವಸ್ಥೆಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರವು ರಾಜ್ಯಗಳಿಗೆ ಒಟ್ಟು 437.17 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ. ರಾಷ್ಟ್ರೀಯ ಸಮಗ್ರ ತಂತ್ರಾಂಶವನ್ನು ನಬಾರ್ಡ್ ಸಿದ್ಧಪಡಿಸಿದೆ. ರಾಜ್ಯಗಳು ಯಂತ್ರಾಂಶ ಖರೀದಿ ಮತ್ತು ಸಿಸ್ಟಂ ಇಂಟಿಗ್ರೇಟರ್ ಅನ್ನು ಅಂತಿಮಗೊಳಿಸಿದ ನಂತರ ಗಣಕೀಕರಣ ಪ್ರಾರಂಭವಾಗುತ್ತದೆ.

ಈ ಉಪಕ್ರಮವು ಪ್ರಾಥಮಿಕ ಸಹಕಾರ ಸಂಘಗಳಲ್ಲಿ (ಪಿಎಸಿಎಸ್) ದಕ್ಷತೆ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸುತ್ತದೆ.

**3. ಪ್ರತಿ ಪಂಚಾಯಿತಿ/ಗ್ರಾಮದಲ್ಲಿ ವಿವಿಧೋದ್ದೇಶ ಪಿಎಸಿಎಸ್/ಡೈರಿ/ಮೀನುಗಾರಿಕಾ ಸಹಕಾರ ಸಂಘಗಳ ಸ್ಥಾಪನೆ (2 ಲಕ್ಷ ಹೊಸ ಸಂಘಗಳು)**

ಫೆಬ್ರುವರಿ 15, 2023 ರಂದು ಸಚಿವ ಸಂಪುಟವು ಅನುಮೋದಿಸಿದ ಈ ಯೋಜನೆಯು ಮುಂದಿನ 5 ವರ್ಷಗಳಲ್ಲಿ ಈವರೆಗೆ ಇಂಥ ಸಂಘಗಳಿರದ ಪಂಚಾಯತ್ / ಹಳ್ಳಿಗಳಲ್ಲಿ 2 ಲಕ್ಷ ಹೊಸ ವಿವಿಧೋದ್ದೇಶ ಪಿಎಸಿಎಸ್ / ಡೈರಿ / ಮೀನುಗಾರಿಕೆ

ಸಹಕಾರ ಸಂಘಗಳನ್ನು ಸ್ಥಾಪಿಸುವ ಗುರಿಯನ್ನು ಹೊಂದಿದೆ. ಇದರ ಅಡಿಯಲ್ಲಿ, ಭಾರತ ಸರ್ಕಾರದ ವಿವಿಧ ಯೋಜನೆಗಳನ್ನು ಪ್ರಾಥಮಿಕ ಸಹಕಾರಿ ಸಂಘಗಳ ಮಟ್ಟದಲ್ಲಿ ಸಂಯೋಜಿಸಲಾಗುವುದು. ಈ ಯೋಜನೆಯ ಅನುಷ್ಠಾನಕ್ಕಾಗಿ ಅಂತರ ಸಚಿವಾಲಯ ಸಮಿತಿ, ರಾಷ್ಟ್ರೀಯ ಮಟ್ಟದ ಸಮನ್ವಯ ಸಮಿತಿ, ರಾಜ್ಯ ಮಟ್ಟದ ಸಹಕಾರ ಅಭಿವೃದ್ಧಿ ಸಮಿತಿಗಳು ಮತ್ತು ಜಿಲ್ಲಾ ಮಟ್ಟದ ಸಹಕಾರ ಅಭಿವೃದ್ಧಿ ಸಮಿತಿಗಳನ್ನು ರಚಿಸಲಾಗಿದೆ. ಸಚಿವಾಲಯವು ಎಲ್ಲಾ ರಾಜ್ಯಗಳೊಂದಿಗೆ ಸಭೆಗಳನ್ನು ನಡೆಸುತ್ತಿದೆ. ಹೊಸ ಸಂಘಗಳ ಸ್ಥಾಪನೆಗೆ ಸಂಬಂಧಿಸಿದ ಕ್ರಿಯಾ ಯೋಜನೆಯನ್ನು ನಬಾರ್ಡ್, ಎನ್ ಡಿಡಿಬಿ ಮತ್ತು ಎನ್ ಎಫ್ ಡಿಬಿ ಸಿದ್ಧಪಡಿಸಿದ್ದು, ಈ ಯೋಜನೆಯ ಮೇರೆಗೆ ಈಗಾಗಲೇ ಕೆಲಸ ಪ್ರಾರಂಭವಾಗಿದೆ.

## 4. ಆಹಾರ ಭದ್ರತೆಯನ್ನು ಖಾತರಿ ಪಡಿಸಲು ಸಹಕಾರಿ ವಲಯದಲ್ಲಿ ವಿಶ್ವದ ಅತಿದೊಡ್ಡ ವಿಕೇಂದ್ರೀಕೃತ ಧಾನ್ಯ ಶೇಖರಣಾ ಕಾರ್ಯಕ್ರಮ

ಮೇ 31, 2023 ರಂದು ಕ್ಯಾಬಿನೆಟ್ ಅನುಮೋದಿಸಿದ ಈ ಯೋಜನೆಯಡಿ, ಪಿಎಸಿಎಸ್ ಮಟ್ಟದಲ್ಲಿ ಭಾರತ ಸರ್ಕಾರದ ವಿವಿಧ ಯೋಜನೆಗಳನ್ನು ಒಗ್ಗೂಡಿಸುವ ಮೂಲಕ, ಗೋದಾಮುಗಳು, ಕಸ್ಟಮ್ ಬಾಡಿಗೆ ಕೇಂದ್ರಗಳು, ಸಂಸ್ಕರಣಾ ಘಟಕಗಳು, ನ್ಯಾಯಬೆಲೆ ಅಂಗಡಿಗಳು ಮುಂತಾದ ವಿವಿಧ ರೀತಿಯ ಕೃಷಿ ಮೂಲಸೌಕರ್ಯಗಳನ್ನು ರಚಿಸಲಾಗುವುದು. ಈ ಯೋಜನೆಯು ದೇಶದ ಆಹಾರ ಭದ್ರತೆಯನ್ನು ಖಾತರಿಪಡಿಸುತ್ತದೆ, ಆಹಾರ ಧಾನ್ಯಗಳು ವ್ಯರ್ಥವಾಗುವುದನ್ನು ಕಡಿಮೆ ಮಾಡುತ್ತದೆ, ರೈತರಿಗೆ ತಮ್ಮ ಉತ್ಪನ್ನಗಳಿಗೆ ಉತ್ತಮ ಬೆಲೆಯನ್ನು ನೀಡುತ್ತದೆ ಮತ್ತು ಪಿಎಸಿಎಸ್ ಮಟ್ಟದಲ್ಲಿಯೇ ವಿವಿಧ ಕೃಷಿ ಅಗತ್ಯಗಳನ್ನು ಪೂರೈಸುತ್ತದೆ. ಈ ಯೋಜನೆಯ ಅನುಷ್ಠಾನವನ್ನು ರಾಜ್ಯಗಳ ಸಹಕಾರದೊಂದಿಗೆ ಪ್ರಾಯೋಗಿಕ ಯೋಜನೆಯ ಮೂಲಕ ಆರಂಭಿಸಲಾಗುತ್ತಿದೆ ಮತ್ತು ಅಂತರ ಸಚಿವಾಲಯ ಸಮಿತಿ, ರಾಷ್ಟ್ರೀಯ ಮಟ್ಟದ ಸಮನ್ವಯ ಸಮಿತಿ, ರಾಜ್ಯ ಮಟ್ಟದ ಸಹಕಾರಿ ಅಭಿವೃದ್ಧಿ ಸಮಿತಿ ಮತ್ತು ಜಿಲ್ಲಾ ಮಟ್ಟದ ಸಹಕಾರಿ ಅಭಿವೃದ್ಧಿ ಸಮಿತಿಯು ಯೋಜನೆಯನ್ನು ಸಮನ್ವಯಗೊಳಿಸುತ್ತದೆ.

**5. ಇ-ಸೇವೆಗಳಿಗೆ ಉತ್ತಮ ಪ್ರವೇಶಾವಕಾಶಕ್ಕಾಗಿ (access) ಪಿಎಸಿಎಸ್ ಗಳನ್ನು ಸಾಮಾನ್ಯ ಸೇವಾ ಕೇಂದ್ರಗಳಾಗಿ (ಸಿಎಸ್ ಸಿ) ಬಳಸಲಾಗುತ್ತದೆ**

ಪಿಎಸಿಎಸ್ ಮೂಲಕ ಸಿಎಸ್ಸಿ ಸೇವೆಗಳನ್ನು ಒದಗಿಸಲು ಸಹಕಾರ ಸಚಿವಾಲಯ, ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ, ನಬಾರ್ಡ್ ಮತ್ತು ಸಿಎಸ್ಸಿ ಇ-ಗವರ್ನೆನ್ಸ್ ಸರ್ವೀಸಸ್ ಇಂಡಿಯಾ ಲಿಮಿಟೆಡ್ ನಡುವೆ 02.02.2023 ರಂದು ತಿಳುವಳಿಕಾ ಒಡಂಬಡಿಕೆಗೆ ಸಹಿ ಹಾಕಲಾಗಿದೆ. ಇಲ್ಲಿಯವರೆಗೆ 15,000 ಕ್ಕೂ ಹೆಚ್ಚು ಪಿಎಸಿಎಸ್ ಗಳನ್ನು ಸಿಎಸ್ ಸಿಯಾಗಿ ಅಭಿಮುಖಗೊಳಿಸಲಾಗಿದೆ (onboarded) ಮತ್ತು ಇತರ ಪಿಎಸಿಎಸ್ ಗಳನ್ನು ಅಭಿಮುಖಗೊಳಿಸುವ ಕಾರ್ಯವೂ ಕೆಲಸವೂ ಪ್ರಗತಿಯಲ್ಲಿದೆ. ಅಭಿಮುಖಗೊಳಿಸಲಾದ ಪಿಎಸಿಎಸ್ಗಳಿಗೆ ಸಿಎಸ್ಸಿ-ಎಸ್ಪಿವಿ ಮತ್ತು ನಬಾರ್ಡ್ ತರಬೇತಿ ನೀಡುತ್ತಿದೆ.

**6. ಪ್ರಾಥಮಿಕ ಸಹಕಾರ ಸಂಘಗಳಿಂದ ಹೊಸ ರೈತ ಉತ್ಪಾದಕ ಸಂಸ್ಥೆಗಳ (ಎಫ್ ಪಿಒ) ರಚನೆ**

**ರೈತ ಉತ್ಪಾದಕ ಸಂಸ್ಥೆ** ಯೋಜನೆಯಡಿ (ಎಫ್ ಪಿಒ ಸ್ಕೀಂ), ಸಹಕಾರಿ ವಲಯದಲ್ಲಿ 1100 ಹೆಚ್ಚುವರಿ ಎಫ್ ಪಿಒಗಳನ್ನು ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮಕ್ಕೆ (ಎನ್.ಸಿ.ಡಿ.ಸಿ.) ಹಂಚಿಕೆ ಮಾಡಲು ನಿರ್ಧರಿಸಲಾಗಿದೆ. ಈಗ, ಪಿಎಸಿಎಸ್ ಕೃಷಿಗೆ ಸಂಬಂಧಿಸಿದ ಇತರ ಆರ್ಥಿಕ ಚಟುವಟಿಕೆಗಳನ್ನು ಎಫ್ಪಿಒಗಳಾಗಿ ಮಾಡಲು ಸಾಧ್ಯವಾಗುತ್ತದೆ. ಈ ಉಪಕ್ರಮವು ಸಹಕಾರಿ ಸಂಘಗಳ ಸದಸ್ಯರಿಗೆ ತಮ್ಮ ಉತ್ಪನ್ನಗಳಿಗೆ ನ್ಯಾಯಯುತ ಮತ್ತು ಲಾಭದಾಯಕ ಬೆಲೆಗಳನ್ನು ಪಡೆಯಲು ಅಗತ್ಯವಾದ ಮಾರುಕಟ್ಟೆ ಸಂಪರ್ಕವನ್ನು ಒದಗಿಸಲು ನೆರವಾಗುತ್ತದೆ.

**7. ಎಲ್ಪಿಜಿ ವಿತರಕರಿಗೆ ಪಿಎಸಿಎಸ್ ಅರ್ಹತೆ**

ಪೆಟ್ರೋಲಿಯಂ ಸಚಿವಾಲಯವು ಪಿಎಸಿಎಸ್ ಅನ್ನು ಎಲ್ಪಿಜಿ ವಿತರಕರಿಗೆ ಅರ್ಹವಾಗಿಸಲು ನಿಯಮಗಳನ್ನು ತಿದ್ದುಪಡಿ ಮಾಡುತ್ತಿದೆ; ಈ ತಿದ್ದುಪಡಿಯ ನಂತರ **ಪ್ರಾಥಮಿಕ ಸಹಕಾರ ಸಂಘಗಳು** ಎಲ್ಪಿಜಿಯನ್ನು ವಿತರಿಸಲು

ಸಾಧ್ಯವಾಗುತ್ತ. ಇದು ಪಿಎಸಿಎಸ್ ಗಳಿಗೆ ತಮ್ಮ ಆರ್ಥಿಕ ಚಟುವಟಿಕೆಗಳನ್ನು ಹೆಚ್ಚಿಸಿಕೊಳ್ಳುವ ಅವಕಾಶ ಕಲ್ಪಿಸುತ್ತದೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ.

**8. ಪಿಎಸಿಎಸ್ ನಿರ್ವಹಿಸುವ ಬೃಹತ್ ಗ್ರಾಹಕ ಪೆಟ್ರೋಲ್ ಪಂಪ್ ಅನ್ನು ಚಿಲ್ಲರೆ ಮಳಿಗೆಯಾಗಿ (ರೀಟೈಲ್ ಔಟ್ಲೆಟ್) ಪರಿವರ್ತಿಸಲು ಅನುಮತಿ**

ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಅಸ್ತಿತ್ವದಲ್ಲಿರುವ ಬೃಹತ್ ಗ್ರಾಹಕ ಪರವಾನಗಿ ಪಡೆದ ಪಿಎಸಿಎಸ್ ಅನ್ನು ಚಿಲ್ಲರೆ ಮಳಿಗೆಗಳಾಗಿ ಪರಿವರ್ತಿಸಲು ಒಪ್ಪಿಕೊಂಡಿದೆ. ಹೊಸ ಪೆಟ್ರೋಲ್ ಪಂಪ್ ಡೀಲರ್ ಶಿಪ್ ಗಾಗಿ ಪಿಎಸಿಎಸ್ ಗೆ ಆದ್ಯತೆ ನೀಡಲಾಗುವುದು. ಈ ನಿಬಂಧನೆಗಳು ಪಿಎಸಿಎಸ್ ಗಳ ಲಾಭವನ್ನು ಹೆಚ್ಚಿಸುತ್ತವೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತವೆ.

**9. ಗ್ರಾಮೀಣ ಮಟ್ಟದಲ್ಲಿ ಜೆನೆರಿಕ್ ಔಷಧಿಗಳ ಲಭ್ಯತೆಗಾಗಿ ಪಿಎಸಿಎಸ್ ಜನೌಷಧಿ ಕೇಂದ್ರ**

ಮಾನ್ಯ ಗೃಹ ಮತ್ತು ಸಹಕಾರ ಸಚಿವರ ಅಧ್ಯಕ್ಷತೆಯಲ್ಲಿ ಮಾನ್ಯ ರಾಸಾಯನಿಕ ಮತ್ತು ರಸಗೊಬ್ಬರ ಸಚಿವರೊಂದಿಗೆ 2023 ರ ಜೂನ್ 06 ರಂದು ನಡೆದ ಸಭೆಯಲ್ಲಿ, 2023 ರ ಆಗಸ್ಟ್ ವೇಳೆಗೆ 1,000 ಜನೌಷಧಿ ಕೇಂದ್ರಗಳನ್ನು ಮತ್ತು 2023 ರ ಡಿಸೆಂಬರ್ ವೇಳೆಗೆ ಗುರುತಿಸಲಾದ ಪಿಎಸಿಎಸ್ನಲ್ಲಿ 2,000 ಜನೌಷಧಿ ಕೇಂದ್ರಗಳನ್ನು ತೆರೆಯಲು ನಿರ್ಧರಿಸಲಾಯಿತು. ಈ ಉಪಕ್ರಮದೊಂದಿಗೆ, ಅಗ್ಗದ ಜೆನೆರಿಕ್ ಔಷಧಿಗಳು ಗ್ರಾಮ / ಬ್ಲಾಕ್ ಮಟ್ಟದಲ್ಲಿ ಸಾಮಾನ್ಯ ಜನರಿಗೆ ಲಭ್ಯವಾಗುತ್ತವೆ ಮತ್ತು ಪಿಎಸಿಎಸ್ ಹೆಚ್ಚುವರಿ ಉದ್ಯೋಗಾವಕಾಶಗಳನ್ನು ಪಡೆಯುತ್ತವೆ. ಆಸಕ್ತ ಪಿಎಸಿಎಸ್ ಗಳನ್ನು ಗುರುತಿಸಿ ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ರಾಜ್ಯ ಸರ್ಕಾರವು ಪ್ರೋತ್ಸಾಹಿಸಬೇಕು.

## 10.ರಸಗೊಬ್ಬರ ವಿತರಣಾ ಕೇಂದ್ರವಾಗಿ ಪಿಎಸಿಎಸ್

ಮಾನ್ಯ ಗೃಹ ವ್ಯವಹಾರಗಳ ಸಚಿವರ ಅಧ್ಯಕ್ಷತೆಯಲ್ಲಿ 2023 ರ ಜೂನ್ 06 ರಂದು ನಡೆದ ಸಭೆಯಲ್ಲಿ, ಕ್ರಿಯಾತ್ಮಕ ಪ್ರಾಥಮಿಕ ಕೃಷಿ ಸಹಕಾರ ಸಂಘಗಳನ್ನು (ಪಿಎಸಿಎಸ್) ರಸಗೊಬ್ಬರ ಚಿಲ್ಲರೆ ವ್ಯಾಪಾರಿಗಳು, ಪ್ರಧಾನ ಮಂತ್ರಿ ಕಿಸಾನ್ ಸಮೃದ್ಧಿ ಕೇಂದ್ರಗಳು (ಪಿಎಂಕೆಎಸ್ಕೆ) ಮತ್ತು ರಸಗೊಬ್ಬರಗಳು ಮತ್ತು ಕೀಟನಾಶಕ ಸಿಂಪಡಿಕೆಯ ಡ್ರೋನ್ ಉದ್ಯಮಿಗಳಾಗಿ ಕಾರ್ಯನಿರ್ವಹಿಸಲು ಅರ್ಹರನ್ನಾಗಿ ಮಾಡಲು ನಿರ್ಧಾರ ತೆಗೆದುಕೊಳ್ಳಲಾಗಿದೆ. ಈ ಡ್ರೋನ್ಗಳನ್ನು ಆಸ್ತಿ ಸಮೀಕ್ಷೆಗೆ ಸಹ ಬಳಸಬಹುದು. ಈ ಕ್ರಮವು ಪಿಎಸಿಎಸ್ ಮಟ್ಟದಲ್ಲಿ ರೈತರಿಗೆ ರಸಗೊಬ್ಬರಗಳ ಲಭ್ಯತೆಯನ್ನು ಖಾತರಿ ಪಡಿಸುತ್ತದೆ ಮತ್ತು ಪಿಎಸಿಎಸ್ ಗಳಿಗೆ ಹೊಸ ವ್ಯವಹಾರ ಅವಕಾಶಗಳನ್ನು ಸೃಷ್ಟಿಸುತ್ತದೆ.

## 11.ಪಿಎಸಿಎಸ್ ಮಟ್ಟದಲ್ಲಿ ಪಿಎಂ-ಕುಸುಮ್ ಯೋಜನೆಯ ಸಂಯೋಜನೆ

13 ಕೋಟಿ ರೈತ ಸದಸ್ಯರೊಂದಿಗೆ ನೇರ ಸಂಪರ್ಕ ಹೊಂದಿರುವ ಪಿಎಸಿಎಸ್ ನ ರಚನೆ ಮತ್ತು ವ್ಯಾಪ್ತಿಯನ್ನು ಪಂಚಾಯತ್ ಮಟ್ಟದಲ್ಲಿ ವಿಕೇಂದ್ರೀಕೃತ ಸೌರ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲು ಬಳಸಿಕೊಳ್ಳಬಹುದು. ಇದರೊಂದಿಗೆ, ಪಿಎಸಿಎಸ್ಗೆ ಸಂಪರ್ಕ ಹೊಂದಿದ ರೈತರು ಕೃಷಿ ಡೀಸೆಲ್ ಪಂಪ್ಗಳನ್ನು ಸೌರ ಕೃಷಿ ನೀರಿನ ಪಂಪ್ಗಳೊಂದಿಗೆ ಬದಲಾಯಿಸಬಹುದು ಮತ್ತು ತಮ್ಮ ಭೂಮಿಯ ಅಂಚಿನಲ್ಲಿ ಫೋಟೋವೋಲ್ಟಾಯಿಕ್ ಮಾಡ್ಯೂಲ್ಗಳನ್ನು ಸ್ಥಾಪಿಸುವ ಮೂಲಕ ತಮ್ಮ ಇಂಧನ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಬಹುದು, ಆ ಮೂಲಕ ಯೋಜನೆಯ ವ್ಯಾಪ್ತಿಯನ್ನ ಇನ್ನಷ್ಟು ವಿಸ್ತರಿಸಬಹುದು.  ಇದಲ್ಲದೆ, ಪಿಎಸಿಎಸ್ ಮತ್ತು ಅದರ ಸದಸ್ಯ ರೈತರು ಪರ್ಯಾಯ ಆದಾಯದ ಮೂಲಗಳನ್ನು ಪಡೆಯುತ್ತಾರೆ. ಈ ವಿಷಯದ ಬಗ್ಗೆ ಸಹಕಾರ ಸಚಿವಾಲಯವು ಪರಿಕಲ್ಪನೆಯ ಟಿಪ್ಪಣಿಯನ್ನು ಸಿದ್ಧಪಡಿಸಿ ಎಂ.ಎನ್.ಆರ್.ಇ. ಗೆ ಕಳಿಸಿದೆ ಮತ್ತು ಈ ಪ್ರಸ್ತಾಪ ಕುರಿತು ಮಾನ್ಯ ಹೊಸ ಮತ್ತು ನವೀಕರಣಸಾಧ್ಯ ಇಂಧನ ಖಾತೆಯ ಸಚಿವರೊಂದಿಗೆ (ಸಹಕಾರ) ಕಾರ್ಯದರ್ಶಿಯ ಭೇಟಿಯಾಗಿದೆ.

## (ಬಿ) ಸಹಕಾರ ಸಂಘಗಳಿಗೆ ಆದಾಯ ತೆರಿಗೆ ಕಾನೂನಿನಲ್ಲಿ ಪರಿಹಾರ

### 12. ಸಹಕಾರ ಸಂಘಗಳಿಗೆ ಆದಾಯ ತೆರಿಗೆ ಮೇಲಿನ ಸರ್ಚಾರ್ಜ್ ಕಡಿತ

1 ಕೋಟಿ ರೂ.ಗಳಿಂದ 10 ಕೋಟಿ ರೂ.ವರೆಗಿನ ಆದಾಯ ಹೊಂದಿರುವ ಸಹಕಾರಿ ಸಂಘಗಳಿಗೆ ಆದಾಯ ತೆರಿಗೆ ಮೇಲಿನ ಸರ್ಚಾರ್ಜ್ ಅನ್ನು ಕಂಪನಿಗಳಿಗೆ ಇರುವಂತೆ 12% ರಿಂದ 7% ಕ್ಕೆ ಇಳಿಸಲಾಗಿದೆ. ಇದು ಸಹಕಾರಿ ಸಂಘಗಳ ಮೇಲಿನ ಆದಾಯ ತೆರಿಗೆಯ ಹೊರೆಯನ್ನು ಕಡಿಮೆ ಮಾಡುತ್ತದೆ ಮತ್ತು ಸದಸ್ಯರ ಅನುಕೂಲಕ್ಕಾಗಿ ಕೆಲಸ ಮಾಡಲು ಸಂಘಗಳಲ್ಲಿ ಹೆಚ್ಚಿನ ಬಂಡವಾಳ ಲಭ್ಯವಿರುತ್ತದೆ.

### 13.ಸಹಕಾರಿ ಸಂಘಗಳ ಮೇಲಿನ ಕನಿಷ್ಠ ಪರ್ಯಾಯ ತೆರಿಗೆ (ಎಂಎಟಿ) ಕಡಿತ

ಸಹಕಾರಿ ಸಂಘಗಳಿಗೆ ಕನಿಷ್ಠ ಪರ್ಯಾಯ ತೆರಿಗೆ ದರವನ್ನು 18.5% ರಿಂದ 15% ಕ್ಕೆ ಇಳಿಸಲಾಗಿದೆ. ಈ ನಿಬಂಧನೆಯೊಂದಿಗೆ, ಈಗ ಈ ನಿಟ್ಟಿನಲ್ಲಿ ಸಹಕಾರಿ ಸಂಘಗಳು ಮತ್ತು ಕಂಪನಿಗಳ ನಡುವೆ ಸಮಾನತೆ ಇರುತ್ತದೆ. ಇದು ಸಹಕಾರಿ ಸಂಘಗಳನ್ನು ಬಲಪಡಿಸುತ್ತದೆ ಮತ್ತು ಸಹಕಾರಿ ಕ್ಷೇತ್ರವು ವಿಸ್ತರಿಸುತ್ತದೆ.

### 14.ಪಿಎಸಿಎಸ್ ಮತ್ತು ಪಿಸಿಎಆರ್ಡಿಬಿಗಳಿಂದ ನಗದು ಠೇವಣಿ ಮತ್ತು ನಗದು ಸಾಲಗಳ ಮಿತಿ ಹೆಚ್ಚಳ

ಪಿಎಸಿಎಸ್ ನಗದು ಠೇವಣಿಗಳ ಮತ್ತು ಮತ್ತು ಪ್ರಾಥಮಿಕ ಸಹಕಾರ ಸಂಸ್ಥೆಗಳು ಮತ್ತು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳಿಂದ (PCRDBs) ನಗದು ಸಾಲಗಳ ಮಿತಿಯನ್ನು ಪ್ರತಿ ಸದಸ್ಯರಿಗೆ 20,000 ರೂ.ಗಳಿಂದ 2 ಲಕ್ಷ ರೂ.ಗೆ ಹೆಚ್ಚಿಸಲಾಗಿದೆ. ಈ ಉಪಬಂಧವು ಅವರ ಚಟುವಟಿಕೆಗಳನ್ನು ಸುಗಮಗೊಳಿಸುತ್ತದೆ, ಅವರ ವ್ಯವಹಾರವನ್ನು ಹೆಚ್ಚಿಸುತ್ತದೆ ಮತ್ತು ಸಂಘಗಳ ಸದಸ್ಯರಿಗೆ ಪ್ರಯೋಜನವನ್ನು ನೀಡುತ್ತದೆ.

### 15.ಹೊಸ ಉತ್ಪಾದನಾ ಸಹಕಾರ ಸಂಘಗಳಿಗೆ ತೆರಿಗೆ ಕಡಿತ

ಮಾರ್ಚ್ 31, 2024 ರೊಳಗೆ ಉತ್ಪಾದನಾ ಕಾರ್ಯಾಚರಣೆಯನ್ನು ಪ್ರಾರಂಭಿಸುವ ಹೊಸ ಉತ್ಪಾದನಾ ಸಹಕಾರ ಸಂಘಗಳಿಗೆ ಪ್ರಸ್ತುತ 30% ವರೆಗಿನ ತೆರಿಗೆ ದರಕ್ಕೆ ಬದಲಾಗಿ 15% ಫ್ಲಾಟ್ ದರದಲ್ಲಿ ತೆರಿಗೆ ವಿಧಿಸಲಾಗುವುದು. ಈ ಉಪಬಂಧದಿಂದಾಗಿ, ಈಗ ಈ ನಿಟ್ಟಿನಲ್ಲಿ ಸಹಕಾರಿ ಸಂಘಗಳು ಮತ್ತು ಕಂಪನಿಗಳ

ನಡುವೆ ಸಮಾನತೆ ಇರುತ್ತದೆ. ಇದು ಉತ್ಪಾದನಾ ವಲಯದಲ್ಲಿ ಹೊಸ ಸಹಕಾರಿ ಸಂಘಗಳ ರಚನೆಯನ್ನು ಉತ್ತೇಜಿಸುತ್ತದೆ.

**16. ನಗದು ಹಿಂಪಡೆಯುವಿಕೆಯಲ್ಲಿ ಮೂಲದಲ್ಲಿ ತೆರಿಗೆ ಕಡಿತದ (ಟಿಡಿಎಸ್) ಮಿತಿಯಲ್ಲಿ ಹೆಚ್ಚಳ** ಕೇಂದ್ರ ಬಜೆಟ್ 2023-24 ರ ಮೂಲಕ, ಮೂಲದಲ್ಲಿ ತೆರಿಗೆ ಕಡಿತವಿಲ್ಲದೆ ಸಹಕಾರಿ ಸಂಘಗಳ ನಗದು ಹಿಂಪಡೆಯುವ ಮಿತಿಯನ್ನು ವರ್ಷಕ್ಕೆ 1 ಕೋಟಿ ರೂ.ಗಳಿಂದ 3 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ. ಈ ಉಪಬಂಧವು ಸಹಕಾರಿ ಸಂಘಗಳಿಗೆ ಮೂಲದಲ್ಲಿ ತೆರಿಗೆ ಕಡಿತ (ಟಿಡಿಎಸ್) ಅನ್ನು ಉಳಿಸುತ್ತದೆ, ಇದನ್ನು ಅವರು ತಮ್ಮ ಸದಸ್ಯರ ಅನುಕೂಲಕ್ಕಾಗಿ ಕೆಲಸ ಮಾಡಲು ಬಳಸಿಕೊಳ್ಳಬಹುದು.

**17. ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 269 ಎಸ್ ಟಿ ಅಡಿಯಲ್ಲಿ ನಗದು ವಹಿವಾಟಿನಲ್ಲಿ ಪರಿಹಾರ**

ಸಹಕಾರಿ ಸಂಘಗಳು ಈ ಹಿಂದೆ ತಮ್ಮ ವಿತರಕರೊಂದಿಗಿನ 'ಒಪ್ಪಂದ'ವನ್ನು 'ಒಂದು ಘಟನೆ' ಎಂದು ಪರಿಗಣಿಸುತ್ತಿದ್ದವು ಮತ್ತು ಇಡೀ ವರ್ಷದಲ್ಲಿ ಆ ವಿತರಕರೊಂದಿಗಿನ ಎಲ್ಲಾ ವಹಿವಾಟುಗಳಲ್ಲಿ, ನಗದು ಸ್ವೀಕೃತಿ ಎರಡು ಲಕ್ಷ ರೂ.ಗಿಂತ ಹೆಚ್ಚಿದ್ದರೆ, ಅದನ್ನು ತೆರಿಗೆಗೆ ಒಳಪಡುತ್ತದೆ ಎಂದು ಪರಿಗಣಿಸಲಾಗುತ್ತಿತ್ತು ಮತ್ತು ಅದರ ಮೇಲೆ ಆದಾಯ ತೆರಿಗೆ ದಂಡ ವಿಧಿಸಲಾಗುತ್ತಿತ್ತು. ಆದಾಯ ತೆರಿಗೆ ಇಲಾಖೆ ಸುತ್ತೋಲೆ ಹೊರಡಿಸಿದ್ದು, ಸಹಕಾರಿ ಸಂಘಗಳು ತಮ್ಮ ವಿತರಕರೊಂದಿಗೆ ಮಾಡಿಕೊಂಡಿರುವ ಒಪ್ಪಂದವನ್ನು 'ಘಟನೆ' ಎಂದು ಪರಿಗಣಿಸಲಾಗುವುದಿಲ್ಲ ಎಂದು ಸ್ಪಷ್ಟಪಡಿಸಿದೆ. ಈ ಸ್ಪಷ್ಟೀಕರಣದೊಂದಿಗೆ, ಸಹಕಾರಿ ಸಂಘಗಳು ತಮ್ಮ ವಿತರಕರೊಂದಿಗೆ ಮಾಡಿದ 2 ಲಕ್ಷಕ್ಕಿಂತ ಹೆಚ್ಚಿನ ನಗದು ವಹಿವಾಟನ್ನು ಪ್ರತ್ಯೇಕವಾಗಿ ಪರಿಗಣಿಸಲಾಗುವುದು, ಆದ್ದರಿಂದ ಅವರಿಗೆ ಆದಾಯ ತೆರಿಗೆ ದಂಡ ವಿಧಿಸಲಾಗುವುದಿಲ್ಲ. ಇದರೊಂದಿಗೆ,

ಈಗ ಬ್ಯಾಂಕ್ ರಜಾದಿನಗಳಲ್ಲಿ ರಾಜ್ಯ ಮತ್ತು ಜಿಲ್ಲಾ ಹಾಲು ಒಕ್ಕೂಟಗಳು ತಮ್ಮ ವಿತರಕರಿಂದ ನಗದು ರೂಪದಲ್ಲಿ ಹಣ ಪಡೆದು ಸದಸ್ಯ ಹಾಲು ಉತ್ಪಾದಕರಿಗೆ ನಗದು ರೂಪದಲ್ಲಿ ಪಾವತಿಸಲು ಸಾಧ್ಯವಾಗುತ್ತದೆ.

## (ಸಿ) ಸಹಕಾರ ಬ್ಯಾಂಕುಗಳು ಎದುರಿಸುತ್ತಿರುವ ತೊಂದರೆಗಳ ಪರಿಹಾರ

**18.** ಪಟ್ಟಣ ಸಹಕಾರಿ ಬ್ಯಾಂಕುಗಳು (ಯುಸಿಬಿಗಳು) ಈಗ ತಮ್ಮ ವ್ಯವಹಾರವನ್ನು ವಿಸ್ತರಿಸಲು ಹೊಸ ಶಾಖೆಗಳನ್ನು ತೆರೆಯಲು ಸಾಧ್ಯವಾಗುತ್ತದೆ.

**19.** ವಾಣಿಜ್ಯ ಬ್ಯಾಂಕುಗಳಂತೆ ಯುಸಿಬಿಗಳು ಬಾಕಿ ಇರುವ ಸಾಲಗಳ ಒಂದು ಬಾರಿಯ ಇತ್ಯರ್ಥವನ್ನು ಮಾಡಲು ಸಾಧ್ಯವಾಗುತ್ತದೆ.

**20.** ಯುಸಿಬಿಗಳಿಗೆ ನೀಡಲಾದ ಆದ್ಯತಾ ವಲಯದ ಸಾಲ (ಪಿಎಸ್ಎಲ್) ಗುರಿಗಳನ್ನು ಸಾಧಿಸಲು ಹೆಚ್ಚುವರಿ ಸಮಯ ಮಿತಿಯನ್ನು ನೀಡಲಾಗಿದೆ.

**21.** ಯುಸಿಬಿಗಳೊಂದಿಗೆ ನಿಯಮಿತ ಸಂವಹನಕ್ಕಾಗಿ ಆರ್‌ಬಿಐನಲ್ಲಿ ನೋಡಲ್ ಅಧಿಕಾರಿಯನ್ನು ನೇಮಿಸಲಾಗಿದೆ.

**22.** ಯುಸಿಬಿಗಳು ತಮ್ಮ ಗ್ರಾಹಕರಿಗೆ ಮನೆ ಬಾಗಿಲಿಗೆ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸಲು ರಿಸರ್ವ್ ಬ್ಯಾಂಕ್ ಅನುಮತಿ ನೀಡಿದೆ.

**23.** ಗ್ರಾಮೀಣ ಮತ್ತು ನಗರ ಸಹಕಾರಿ ಬ್ಯಾಂಕುಗಳ ವೈಯಕ್ತಿಕ ಗೃಹ ಸಾಲದ ಮಿತಿಯನ್ನು ರಿಸರ್ವ್ ಬ್ಯಾಂಕ್ ದ್ವಿಗುಣಗೊಳಿಸಿದೆ.

**24.** ಗ್ರಾಮೀಣ ಸಹಕಾರಿ ಬ್ಯಾಂಕುಗಳು ಈಗ ವಾಣಿಜ್ಯ ರಿಯಲ್ ಎಸ್ಟೇಟ್ - ವಸತಿ ವಸತಿ ವಲಯಕ್ಕೆ ಸಾಲ ನೀಡಲು ಸಾಧ್ಯವಾಗುತ್ತದೆ, ಆ ಮೂಲಕ ಅವರ ವ್ಯವಹಾರವು ವೈವಿಧ್ಯಗೊಳ್ಳುತ್ತದೆ.

**25.** ಸಹಕಾರಿ ಬ್ಯಾಂಕುಗಳನ್ನು ಸಿಜಿಟಿಎಂಎಸ್ಇಯ ಸದಸ್ಯ ಸಾಲ ನೀಡಿಕೆ ಸಂಸ್ಥೆಗಳಾಗಿ (ಎಂಎಲ್ಐ) ಸೇರಿಸಲಾಗಿದೆ. ಇದರೊಂದಿಗೆ, ಈಗ ಸದಸ್ಯ ಸಹಕಾರಿ ಬ್ಯಾಂಕುಗಳು ನೀಡಿದ ಸಾಲಗಳ ಮೇಲೆ ಶೇಕಡಾ 85 ರವರೆಗೆ ರಿಸ್ಕ್ ಕವರೇಜಿನ ಲಾಭವನ್ನು ಪಡೆಯಲು ಸಾಧ್ಯವಾಗುತ್ತದೆ. ಇದರೊಂದಿಗೆ,

ಸಹಕಾರಿ ವಲಯದ ಉದ್ಯಮಗಳು ಈಗ ಸಹಕಾರಿ ಬ್ಯಾಂಕುಗಳಿಂದ 5 ಕೋಟಿ ರೂ.ಗಳವರೆಗೆ ಮೇಲಾಧಾರ ರಹಿತ ಸಾಲವನ್ನು ಪಡೆಯಲು ಸಾಧ್ಯವಾಗುತ್ತದೆ.

**26.** ಸಹಕಾರಿ ಬ್ಯಾಂಕುಗಳನ್ನು ಆಧುನಿಕ 'ಆಧಾರ್ ಎನೇಬಲ್ಡ್ ಪೇಮೆಂಟ್ ಸಿಸ್ಟಮ್' (ಎಇಪಿಎಸ್) ಗೆ ಅಭಿಮುಖಗೊಳಿಸಲು (ಆನ್ಬೋರ್ಡ್ ಮಾಡಲು) ಪರವಾನಗಿ ಶುಲ್ಕವನ್ನು ವಹಿವಾಟುಗಳ ಸಂಖ್ಯೆಗೆ ಲಿಂಕ್ ಮಾಡುವ ಮೂಲಕ ಕಡಿಮೆ ಮಾಡಲಾಗಿದೆ. ಇದಲ್ಲದೆ, ಸಹಕಾರಿ ಹಣಕಾಸು ಸಂಸ್ಥೆಗಳು ಉತ್ಪಾದನಾ ಪೂರ್ವ ಹಂತದ ಮೊದಲ ಮೂರು ತಿಂಗಳವರೆಗೆ ಉಚಿತವಾಗಿ ಸೌಲಭ್ಯವನ್ನು ಪಡೆಯಲು ಸಾಧ್ಯವಾಗುತ್ತದೆ. ಇದರೊಂದಿಗೆ, ರೈತರು ಈಗ ತಮ್ಮ ಬೆರಳಚ್ಚುಗಳೊಂದಿಗೆ ತಮ್ಮ ಮನೆಯಲ್ಲಿ ಬ್ಯಾಂಕಿಂಗ್ ಸೌಲಭ್ಯವನ್ನು ಪಡೆಯಲು ಸಾಧ್ಯವಾಗುತ್ತದೆ.

## (ಡಿ) ಸಹಕಾರಿ ಸಕ್ಕರೆ ಕಾರ್ಖಾನೆಗಳ ಪುನರುಜ್ಜೀವನ

### 27. ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಆದಾಯ ತೆರಿಗೆಯಿಂದ ವಿನಾಯಿತಿ

ಸಹಕಾರಿ ಸಕ್ಕರೆ ಕಾರ್ಖಾನೆಗಳು ನ್ಯಾಯೋಚಿತ ಮತ್ತು ಲಾಭದಾಯಕ ಬೆಲೆ ಅಥವಾ ರಾಜ್ಯ ಸೂಚಿಸಿದ ಬೆಲೆಯವರೆಗೆ ರೈತರಿಗೆ ಹೆಚ್ಚಿನ ಕಬ್ಬಿನ ಬೆಲೆಯನ್ನು ಪಾವತಿಸಿದರೆ ಹೆಚ್ಚುವರಿ ಆದಾಯ ತೆರಿಗೆಯನ್ನು ಪಾವತಿಸಬೇಕಾಗಿಲ್ಲ. ಈ ಉಪಬಂಧದೊಂದಿಗೆ, ಸಹಕಾರಿ ಸಕ್ಕರೆ ಕಾರ್ಖಾನೆಗಳು ಈಗ ತಮ್ಮ ಸದಸ್ಯರಿಗೆ ಕಬ್ಬಿನ ಹೆಚ್ಚಿನ ಬೆಲೆಯನ್ನು ನೀಡಲು ಸಾಧ್ಯವಾಗುತ್ತದೆ ಮತ್ತು ಈ ಹೆಚ್ಚಿನ ವೆಚ್ಚದ ಮೇಲೆ ಅವರು ಆದಾಯ ತೆರಿಗೆ ಕಡಿತವನ್ನು ಪಡೆಯುತ್ತಾರೆ.

### 28. ಸಹಕಾರಿ ಸಕ್ಕರೆ ಕಾರ್ಖಾನೆಗಳ ಆದಾಯ ತೆರಿಗೆಗೆ ಸಂಬಂಧಿಸಿದ ದಶಕಗಳಷ್ಟು ಹಳೆಯ ಬಾಕಿ ಇರುವ ಸಮಸ್ಯೆಗಳನ್ನು ಪರಿಹರಿಸುವುದು

ಸಹಕಾರಿ ಸಕ್ಕರೆ ಕಾರ್ಖಾನೆಗಳು 2016-17ನೇ ನಿರ್ಧಾರಣ ವರ್ಷಕ್ಕಿಂತ ಮೊದಲು ಕಬ್ಬು ಬೆಳೆಗಾರರಿಗೆ ಮಾಡಿದ ಪಾವತಿಗಳನ್ನು ಖರ್ಚು ಎಂದು ಕ್ಲೇಮ್ ಮಾಡಲು 2023-24ರ ಕೇಂದ್ರ ಬಜೆಟ್ ಮೂಲಕ ಉಪಬಂಧ ಮಾಡಲಾಗಿದೆ. ಇದರಿಂದ, ಅವು ಸುಮಾರು 10,000 ಕೋಟಿ ರೂಪಾಯಿಗಳ ಪರಿಹಾರವನ್ನು ಪಡೆಯಲು

ಸಾಧ್ಯವಾಗುತ್ತದೆ, ಮತ್ತು ಇದರಿಂದಾಗಿ ದಶಕಗಳಿಂದ ಬಾಕಿ ಇರುವ ಆದಾಯ ತೆರಿಗೆ ಸಮಸ್ಯೆಗಳನ್ನು ಬಗೆಹರಿದಂತಾಗಿದೆ.

**29.ಸಹಕಾರಿ ಸಕ್ಕರೆ ಕಾರ್ಖಾನೆಗಳ ಬಲವರ್ಧನೆಗೆ ಎನ್.ಸಿ.ಡಿ.ಸಿ. ಮೂಲಕ 10,000 ಕೋಟಿ ರೂ.**

ಸಹಕಾರ ಸಚಿವಾಲಯವು 'ಸಹಕಾರಿ ಸಕ್ಕರೆ ಕಾರ್ಖಾನೆಗಳ ಬಲವರ್ಧನೆಗಾಗಿ ಎನ್.ಸಿ.ಡಿ.ಸಿ. ಗೆ ಅನುದಾನ' ಎಂಬ ಹೊಸ ಯೋಜನೆಯನ್ನು ಪ್ರಾರಂಭಿಸಿದೆ, ಇದರ ಅಡಿಯಲ್ಲಿ ಭಾರತ ಸರ್ಕಾರವು 2022-23 ಮತ್ತು 2023-24ರ ಹಣಕಾಸು ವರ್ಷದಲ್ಲಿ ಎನ್.ಸಿ.ಡಿ.ಸಿ. ಗೆ 1,000 ಕೋಟಿ ರೂ.ಗಳ ಅನುದಾನವನ್ನು ನೀಡಲಿದೆ. ಎನ್.ಸಿ.ಡಿ.ಸಿ. ಈ ಅನುದಾನವನ್ನು ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ 10,000 ಕೋಟಿ ರೂ.ಗಳವರೆಗೆ ಸಾಲವನ್ನು ಒದಗಿಸಲು ಬಳಸುತ್ತದೆ, ಇದನ್ನು ಅವರು ಎಥೆನಾಲ್ ಘಟಕಗಳನ್ನು ಸ್ಥಾಪಿಸಲು ಅಥವಾ ಸಹ-ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ಅಥವಾ ದುಡಿಯುವ ಬಂಡವಾಳಕ್ಕಾಗಿ ಅಥವಾ ಎಲ್ಲಾ ಮೂರು ಉದ್ದೇಶಗಳಿಗಾಗಿ ಬಳಸಲು ಸಾಧ್ಯವಾಗುತ್ತದೆ.

**30. ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಎಥೆನಾಲ್ ಖರೀದಿ ಮತ್ತು ಕೋಜೆನ್ ವಿದ್ಯುತ್ ಸ್ಥಾವರಗಳ ಸ್ಥಾಪನೆಗೆ ಆದ್ಯತೆ**

ಎಥೆನಾಲ್ ಮಿಶ್ರಣ ಕಾರ್ಯಕ್ರಮ (ಇಬಿಪಿ) ಅಡಿಯಲ್ಲಿ ಪೆಟ್ರೋಲಿಯಂ ಸಚಿವಾಲಯವು ಎಥೆನಾಲ್ ಸಂಗ್ರಹಣೆಗಾಗಿ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಖಾಸಗಿ ಕಂಪನಿಗಳಿಗೆ ಸರಿಸಮಾನವಾಗಿ ಇರಿಸಲಾಗುವುದು. ಕಬ್ಬಿನ ಸಿಪ್ಪೆಯಿಂದ ಕೋಜೆನರೇಷನ್ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸುವ ಯೋಜನೆಯೂ ಇದೆ. ಈ ಕ್ರಮಗಳಿಂದ, ಸಹಕಾರಿ ಸಕ್ಕರೆ ಕಾರ್ಖಾನೆಗಳ ವ್ಯವಹಾರವು ವಿಸ್ತರಿಸುತ್ತದೆ ಮತ್ತು ಇದರ ಪರಿಣಾಮವಾಗಿ ಅವುಗಳ ಲಾಭವೂ ಹೆಚ್ಚಾಗುತ್ತದೆ.

## (ಇ) ರಾಷ್ಟ್ರೀಯ ಮಟ್ಟದಲ್ಲಿ ಮೂರು ಹೊಸ ಬಹು-ರಾಜ್ಯ ಸೊಸೈಟಿಗಳು

### 31.ರಫ್ತುಗಳಿಗಾಗಿ ಹೊಸ ರಾಷ್ಟ್ರೀಯ ಮಟ್ಟದ ಬಹು-ರಾಜ್ಯ ಸಹಕಾರಿ ಸೊಸೈಟಿ

ಬಹು-ರಾಜ್ಯ ಸಹಕಾರಿ ಸಂಘಗಳ ಕಾಯ್ದೆ, 2002 ರ ಅಡಿಯಲ್ಲಿ, ಸಹಕಾರಿ ವಲಯದಿಂದ ರಫ್ತನ್ನು ಉತ್ತೇಜಿಸಲು ಹೊಸ ರಾಷ್ಟ್ರೀಯ ಸಹಕಾರಿ ರಫ್ತು ನಿಯಮಿತವನ್ನು ಒಂದು ಆಶ್ರಯ ಸಂಸ್ಥೆಯಾಗಿ ಸ್ಥಾಪಿಸಲಾಗಿದೆ. ಜಿಲ್ಲಾ, ರಾಜ್ಯ, ರಾಷ್ಟ್ರಮಟ್ಟದ ಮಹಾಮಂಡಳಗಳು ಮತ್ತು ಬಹು ರಾಜ್ಯ ಸಹಕಾರಿ ಸಂಘಗಳು ಸೇರಿದಂತೆ ಪ್ರಾಥಮಿಕದಿಂದ ರಾಷ್ಟ್ರೀಯ ಮಟ್ಟದ ಸಹಕಾರಿ ಸಂಘಗಳವರೆಗೆ ಇದರ ಸದಸ್ಯರಾಗಬಹುದು. ಈ ಸೊಸೈಟಿಯ ಮೂಲಕ, ರೈತರ ಉತ್ಪನ್ನಗಳ ರಫ್ತಿಗೆ ಅನುಕೂಲವಾಗುತ್ತದೆ ಮತ್ತು ರೈತರು ತಮ್ಮ ಉತ್ಪನ್ನಗಳಿಗೆ ಉತ್ತಮ ಬೆಲೆಯನ್ನು ಪಡೆಯುತ್ತಾರೆ.

### 32. ಪ್ರಮಾಣೀಕೃತ ಬೀಜಗಳಿಗಾಗಿ ಹೊಸ ರಾಷ್ಟ್ರೀಯ ಮಟ್ಟದ ಬಹು-ರಾಜ್ಯ ಸಹಕಾರಿ ಸೊಸೈಟಿ

ಬಹು-ರಾಜ್ಯ ಸಹಕಾರಿ ಸಂಘಗಳ ಕಾಯ್ದೆ, 2002 ರ ಅಡಿಯಲ್ಲಿ, ಹೊಸ ಭಾರತೀಯ ಬೀಜ ಸಹಕಾರಿ ಸಮಿತಿ ಲಿಮಿಟೆಡ್ ಅನ್ನು ಒಂದೇ ಬ್ರಾಂಡ್ ಹೆಸರಿನಲ್ಲಿ ಸುಧಾರಿತ ಬೀಜಗಳ ಕೃಷಿ, ಉತ್ಪಾದನೆ ಮತ್ತು ವಿತರಣೆಗಾಗಿ ಆಶ್ರಯ ಸಂಸ್ಥೆಯಾಗಿ ಸ್ಥಾಪಿಸಲಾಗಿದೆ. ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳ ಸಹಕಾರ ಸಂಘಗಳು (ಪ್ರಾಥಮಿಕ, ಜಿಲ್ಲೆ, ರಾಜ್ಯ ಮಟ್ಟ) ಇದರ ಸದಸ್ಯರಾಗಬಹುದು. ಈ ಸೊಸೈಟಿಯು ರೈತರಿಗೆ ಸುಧಾರಿತ ಬೀಜಗಳ ಲಭ್ಯತೆಯನ್ನು ಹೆಚ್ಚಿಸುತ್ತದೆ, ಬೆಳೆಗಳ ಉತ್ಪಾದಕತೆಯನ್ನು ಹೆಚ್ಚಿಸುತ್ತದೆ ಮತ್ತು ರೈತರ ಆದಾಯವನ್ನು ಹೆಚ್ಚಿಸುತ್ತದೆ.

**33. ಸಾವಯವ ಕೃಷಿಗಾಗಿ ಹೊಸ ರಾಷ್ಟ್ರೀಯ ಮಟ್ಟದ ಬಹು-ರಾಜ್ಯ ಸಹಕಾರಿ ಸೊಸೈಟಿ**

ನ್ಯಾಷನಲ್ ಕೋ-ಆಪರೇಟಿವ್ ಆರ್ಗ್ಯಾನಿಕ್ಸ್ ಲಿಮಿಟೆಡ್ ಅನ್ನು ಮಲ್ಟಿಸ್ಟೇಟ್ ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್, 2002 ರ ಅಡಿಯಲ್ಲಿ ಒಂದು ಆಶ್ರಯ ಸಂಸ್ಥೆಯಾಗಿ ಸ್ಥಾಪಿಸಲಾಗಿದೆ, ಇದು ಪ್ರಮಾಣೀಕೃತ ಮತ್ತು ಅಧಿಕೃತ ಸಾವಯವ ಉತ್ಪನ್ನಗಳ ಉತ್ಪಾದನೆ, ವಿತರಣೆ ಮತ್ತು ಮಾರುಕಟ್ಟೆಗಾಗಿ ಕೆಲಸ ಮಾಡುತ್ತದೆ. ಜಿಲ್ಲಾ, ರಾಜ್ಯ, ರಾಷ್ಟ್ರಮಟ್ಟದ ಒಕ್ಕೂಟಗಳು, ಬಹು ರಾಜ್ಯ ಸಹಕಾರಿ ಸಂಘಗಳು ಮತ್ತು ರೈತ ಉತ್ಪಾದಕ ಸಂಸ್ಥೆಗಳು (ಎಫ್ಪಿಒಗಳು) ಸೇರಿದಂತೆ ಪ್ರಾಥಮಿಕದಿಂದ ರಾಷ್ಟ್ರೀಯ ಮಟ್ಟದ ಸಹಕಾರ ಸಂಘಗಳು ಇದರ ಸದಸ್ಯರಾಗಬಹುದು. ಇದು ಸಾವಯವ ಉತ್ಪನ್ನಗಳ ಉತ್ಪಾದನೆಯನ್ನು ಹೆಚ್ಚಿಸುತ್ತದೆ ಮತ್ತು ರೈತರ ಲಾಭವನ್ನು ಹೆಚ್ಚಿಸುತ್ತದೆ.

## (ಎಫ್) ಸಹಕಾರಿ ಕ್ಷೇತ್ರದಲ್ಲಿ ಶಿಕ್ಷಣ ಮತ್ತು ತರಬೇತಿ

**34. ವಿಶ್ವದ ಅತಿದೊಡ್ಡ ಸಹಕಾರಿ ವಿಶ್ವವಿದ್ಯಾಲಯ ಸ್ಥಾಪನೆ**

ಸಹಕಾರಕ್ಕಾಗಿ ರಾಷ್ಟ್ರೀಯ ಸಹಕಾರಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಯೋಜಿಸಲಾಗಿದೆ; ಶಿಕ್ಷಣ, ತರಬೇತಿ, ಸಲಹಾ, ಸಂಶೋಧನೆ ಮತ್ತು ಅಭಿವೃದ್ಧಿ. ಈ ವಿಶ್ವವಿದ್ಯಾಲಯವು ತರಬೇತಿ ಪಡೆದ ಮಾನವಶಕ್ತಿಯ ಸುಸ್ಥಿರ, ಸಮರ್ಪಕ ಮತ್ತು ಗುಣಮಟ್ಟದ ಪೂರೈಕೆಯನ್ನು ಖಾತರಿಪಡಿಸುತ್ತದೆ ಮತ್ತು ಅಸ್ತಿತ್ವದಲ್ಲಿರುವ ಸಿಬ್ಬಂದಿಯ ಸಾಮರ್ಥ್ಯವರ್ಧನೆಗೆ ಕೆಲಸ ಮಾಡುತ್ತದೆ. ಈ ವಿಶ್ವವಿದ್ಯಾಲಯವು ಈ ರೀತಿಯ ಮೊದಲನೆಯದು, ಸಹಕಾರಿ ಕ್ಷೇತ್ರದಲ್ಲಿ ವಿಶೇಷ ವಿಶ್ವವಿದ್ಯಾಲಯವಾಗಿದೆ.

**35. ಸಹಕಾರಿ ಶಿಕ್ಷಣ ಮತ್ತು ತರಬೇತಿಯ ಹೊಸ ಯೋಜನೆ**

ಸಹಕಾರಿ ಸಂಘಗಳನ್ನು ಬಲವಾದ ಆರ್ಥಿಕ ಸಂಸ್ಥೆಯನ್ನಾಗಿ ಮಾಡಲು, ಸಹಕಾರಿ ಆಂದೋಲನವನ್ನು ವಿಸ್ತರಿಸಲು ಮತ್ತು ಬಲಪಡಿಸಲು, ವಾಮ್ನಿಕಾಮ್, ಎನ್ಸಿಸಿಟಿ ಮತ್ತು ಜೆಸಿಟಿಸಿಯ ಬೋಧಕರ ಸಾಮರ್ಥ್ಯವನ್ನು ಹೆಚ್ಚಿಸಲು, ಸಹಕಾರಿ ಸಂಘಗಳ

ಪ್ರಮುಖ ಕ್ಷೇತ್ರಗಳ ಬಗ್ಗೆ ಗುಣಮಟ್ಟದ ಸಂಶೋಧನೆ ಮತ್ತು ಅಧ್ಯಯನವನ್ನು ಉತ್ತೇಜಿಸಲು ಈ ಯೋಜನೆಯ ಅಗತ್ಯವಿದೆ. ಈ ನಿಟ್ಟಿನಲ್ಲಿ, ಆರಂಭಿಕ ಮಧ್ಯಸ್ಥಗಾರರ ಸಮಾಲೋಚನೆಗಳನ್ನು ನಡೆಸಲಾಗುತ್ತಿದೆ ಮತ್ತು ಮುಂದಿನ ಮೂರು ತಿಂಗಳಲ್ಲಿ ಯೋಜನೆಯನ್ನು ರೂಪಿಸುವ ಗುರಿಯಿದೆ.

**36. ಎನ್ಸಿಸಿಟಿ ಮೂಲಕ ತರಬೇತಿ ಮತ್ತು ಜಾಗೃತಿಯ ಉತ್ತೇಜನ**

ಸಹಕಾರ ಸಚಿವಾಲಯದ ಅಧೀನದಲ್ಲಿರುವ ಸ್ವಾಯತ್ತ ಸಂಸ್ಥೆಯಾದ ನ್ಯಾಷನಲ್ ಕೌನ್ಸಿಲ್ ಫಾರ್ ಕೋ-ಆಪರೇಟಿವ್ ಟ್ರೈನಿಂಗ್ (ಎನ್ಸಿಸಿಟಿ), ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳ ಸಹಕಾರ ಇಲಾಖೆಗಳ ಸಿಬ್ಬಂದಿ ಸೇರಿದಂತೆ ದೇಶಾದ್ಯಂತ ಸಹಕಾರ ಸಂಘಗಳ ಸಿಬ್ಬಂದಿ, ಸದಸ್ಯರು ಮತ್ತು ಮಂಡಳಿಯ ಸದಸ್ಯರಿಗೆ ಸಹಕಾರಿ ಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತದೆ. ಇದು ದೇಶಾದ್ಯಂತ ಹರಡಿರುವ ತನ್ನ 20 ಘಟಕ ತರಬೇತಿ ಸಂಸ್ಥೆಗಳ ಮೂಲಕ ಈ ಕಾರ್ಯಕ್ರಮಗಳನ್ನು ನಡೆಸುತ್ತದೆ, ಅವುಗಳಲ್ಲಿ ವಾಮ್ನಿಕಾಮ್ (ವೈಕುಂಠ ಮೆಹ್ತಾ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಕೋಆಪರೇಟಿವ್ ಮ್ಯಾನೇಜ್ಮೆಂಟ್) ರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿದೆ. ಇದಲ್ಲದೆ, 14 ರಾಜ್ಯ ಮಟ್ಟದ ಮತ್ತು ಐದು ಪ್ರಾದೇಶಿಕ ಮಟ್ಟದ ಸಂಸ್ಥೆಗಳು ಇವೆ. ದೇಶಾದ್ಯಂತ ಸಹಕಾರಿ ಭಾಗವಹಿಸುವವರು, ಕಾರ್ಮಿಕರು ಮತ್ತು ವೃತ್ತಿಪರರಿಗೆ ಎನ್ಸಿಸಿಟಿ 2022-23ನೇ ಸಾಲಿನಲ್ಲಿ, 1740 ತರಬೇತಿ ಕಾರ್ಯಕ್ರಮಗಳ ಗುರಿಯನ್ನು ಮೀರಿ, 3287 ತರಬೇತಿ ಕಾರ್ಯಕ್ರಮಗಳನ್ನು ನಡೆಸಿತು. ಇದಲ್ಲದೆ, ಈ ಅವಧಿಯಲ್ಲಿ, ಕೌನ್ಸಿಲ್ ಸುಮಾರು 2,01,507 ಅಭ್ಯರ್ಥಿಗಳಿಗೆ ತರಬೇತಿಯನ್ನು ನೀಡಿತು, ಇದು ನಿಗದಿತ 43,500 ಅಭ್ಯರ್ಥಿಗಳಿಗಿಂತ ಐದು ಪಟ್ಟು ಹೆಚ್ಚಾಗಿದೆ. ಸಹಕಾರ ಸಂಘಗಳಿಗೆ ಸ್ಥಳೀಯ ಭಾಷೆಗಳಲ್ಲಿ ವೃತ್ತಿಪರ ಅಭಿವೃದ್ಧಿ ಯೋಜನೆಗಳನ್ನು (ಅಸ್ತಿತ್ವದಲ್ಲಿರುವ ಡಿಪಿಆರ್ ಗಳನ್ನು ಆಧರಿಸಿ) ಎನ್ ಸಿಸಿಟಿ ಮೂಲಕ ಸಿದ್ಧಪಡಿಸಲಾಗುತ್ತಿದೆ.

## (G) ಹೊಸ ರಾಷ್ಟ್ರೀಯ ಸಹಕಾರ ನೀತಿ ಮತ್ತು ಹೊಸ ರಾಷ್ಟ್ರೀಯ ಸಹಕಾರಿ ಡೇಟಾಬೇಸ್

### 37.ಹೊಸ ರಾಷ್ಟ್ರೀಯ ಸಹಕಾರ ನೀತಿ ರಚನೆ

'ಸಹಕಾರದ ಮೂಲಕ ಸಮೃದ್ಧಿ' ಪರಿಕಲ್ಪನೆಯನ್ನು ಸಾಕಾರಗೊಳಿಸಲು ಹೊಸ ಸಹಕಾರ ನೀತಿಯನ್ನು ರೂಪಿಸಲು ಕೇಂದ್ರದ ಮಾಜಿ ಸಚಿವ ಶ್ರೀ ಸುರೇಶ್ ಪ್ರಭು ಅವರ ನೇತೃತ್ವದಲ್ಲಿ ವಿವಿಧ ರಾಜ್ಯಗಳು ಮತ್ತು ದೇಶಾದ್ಯಂತದ ತಜ್ಞರು ಮತ್ತು ಮಧ್ಯಸ್ಥಗಾರರನ್ನು ಒಳಗೊಂಡ 49 ಸದಸ್ಯರನ್ನು ಒಳಗೊಂಡ ಬಹುಶಿಸ್ತೀಯ ಮತ್ತು ರಾಷ್ಟ್ರೀಯ ಮಟ್ಟದ ಸಮಿತಿಯನ್ನು ರಚಿಸಲಾಗಿದೆ. ಇಲ್ಲಿಯವರೆಗೆ, ತಜ್ಞರ ಸಮಿತಿಯ 9 ಸಭೆಗಳು ನಡೆದಿವೆ, ಈ ಸಮಯದಲ್ಲಿ ಮಧ್ಯಸ್ಥಗಾರರೊಂದಿಗೆ ವಿವರವಾದ ಚರ್ಚೆಗಳು ನಡೆದಿವೆ ಮತ್ತು ಹೊಸ ರಾಷ್ಟ್ರೀಯ ಸಹಕಾರ ನೀತಿ ಶೀಘ್ರದಲ್ಲೇ ಸಿದ್ಧವಾಗುವ ನಿರೀಕ್ಷೆಯಿದೆ.

### 38. ಹೊಸ ರಾಷ್ಟ್ರೀಯ ಸಹಕಾರಿ ಡೇಟಾಬೇಸ್

ಸಮಗ್ರ, ಅಧಿಕೃತ ಮತ್ತು ನವೀಕರಿಸಿದ ರಾಷ್ಟ್ರೀಯ ಸಹಕಾರಿ ಡೇಟಾಬೇಸ್ ಅನ್ನು ಅಭಿವೃದ್ಧಿಪಡಿಸುವ ಕೆಲಸವನ್ನು ರಾಜ್ಯ ಸರ್ಕಾರಗಳ ನೆರವಿನೊಂದಿಗೆ ಸಹಕಾರ ಸಚಿವಾಲಯವು ಹಂತಹಂತವಾಗಿ ಮಾಡುತ್ತಿದೆ. ಮೊದಲ ಹಂತದಲ್ಲಿ ಪಿಎಸಿಎಸ್, ಹೈನುಗಾರಿಕೆ ಮತ್ತು ಮೀನುಗಾರಿಕೆಯ ಸುಮಾರು 2.64 ಲಕ್ಷ ಸೊಸೈಟಿಗಳ ಮ್ಯಾಪಿಂಗ್ ಅನ್ನು ಫೆಬ್ರುವರಿ 28, 2023 ರಂದು ಪೂರ್ಣಗೊಳಿಸಲಾಗಿದೆ. ಎರಡನೇ ಹಂತದಲ್ಲಿ, ರಾಷ್ಟ್ರೀಯ ಸಹಕಾರಿ ಸಂಘಗಳು ಮತ್ತು ಒಕ್ಕೂಟಗಳ ಮ್ಯಾಪಿಂಗ್ ಮಾಡಲಾಗಿದೆ. ಮೂರನೇ ಹಂತದಲ್ಲಿ, ಇತರ ಎಲ್ಲಾ ಕ್ಷೇತ್ರಗಳ ಸುಮಾರು 5.8 ಲಕ್ಷ ಸಹಕಾರಿ ಸಂಘಗಳನ್ನು ಡೇಟಾಬೇಸ್ನಲ್ಲಿ ಸೇರಿಸಲಾಗುತ್ತಿದ್ದು, ಇದನ್ನು ಜೂನ್ 2023 ರೊಳಗೆ ಪೂರ್ಣಗೊಳಿಸುವ ಗುರಿಯಿದೆ.

## (ಎಚ್) ಜಿಇಎಂ ಪೋರ್ಟಲ್ ನಲ್ಲಿ ಸಹಕಾರ ಸಂಘಗಳನ್ನು 'ಖರೀದಿದಾರ' ಎಂದು ಸೇರಿಸುವುದು

**39.** ಇ-ಮಾರುಕಟ್ಟೆ ಸ್ಥಳ (ಜಿಇಎಂ) ನಲ್ಲಿ ಸಹಕಾರ ಸಂಘಗಳನ್ನು 'ಖರೀದಿದಾರ' ಎಂದು ನೋಂದಾಯಿಸಲು ಕೇಂದ್ರ ಸಚಿವ ಸಂಪುಟವು 2022ರ ಜೂನ್ 1 ರಂದು ಅನುಮೋದನೆ ನೀಡಿದೆ. ಈಗ ಸಹಕಾರಿ ಸಂಘಗಳು ಜಿಇಎಂನ ಒಂದೇ ವೇದಿಕೆಯಲ್ಲಿ ದೇಶಾದ್ಯಂತ ಲಭ್ಯವಿರುವ ಸುಮಾರು 60 ಲಕ್ಷ ಅಧಿಕೃತ ಮಾರಾಟಗಾರರು / ಸೇವಾ ಪೂರೈಕೆದಾರರಿಂದ ಖರೀದಿಸಲು ಸಾಧ್ಯವಾಗುತ್ತದೆ. ಇಲ್ಲಿಯವರೆಗೆ 550 ಕ್ಕೂ ಹೆಚ್ಚು ಸಹಕಾರಿ ಸಂಘಗಳನ್ನು ಜಿಇಎಂ ಪೋರ್ಟಲ್ ನಲ್ಲಿ ಖರೀದಿದಾರರಾಗಿ ಅಭಿಮುಖಗೊಳಿಸಲಾಗಿದೆ (ಆನ್ ಬೋರ್ಡ್ ಮಾಡಲಾಗಿದೆ). ಇದಲ್ಲದೆ, ಸಹಕಾರಿ ಸಂಘಗಳನ್ನು ಜಿಇಎಂನಲ್ಲಿ ಮಾರಾಟಗಾರರಾಗಿ ನೋಂದಾಯಿಸಲು ಪ್ರೇರೇಪಿಸಲಾಗುತ್ತಿದೆ.

## (ಐ) ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ (NCDC) ವಿಸ್ತರಣೆ

**40.** ಸಹಕಾರ ಸಂಘಗಳಿಗೆ ಸ್ವಸಹಾಯ ಗುಂಪುಗಳಿಗೆ 'ಸ್ವಯಂಶಕ್ತಿ ಸಹಕಾರ್' ನಂತಹ ವಿವಿಧ ಕ್ಷೇತ್ರಗಳಲ್ಲಿ ಹೊಸ ಯೋಜನೆಗಳನ್ನು ಎನ್ಸಿಡಿಸಿ ಪ್ರಾರಂಭಿಸಿದೆ: ದೀರ್ಘಕಾಲೀನ ಕೃಷಿ ಸಾಲಕ್ಕಾಗಿ 'ದೀರ್ಘಾವಧಿ ಕೃಷಿಕ ಸಹಕಾರ್'; ಹೈನುಗಾರಿಕೆಗೆ 'ಡೈರಿ ಸಹಕಾರಿ' ಮತ್ತು ಮಹಿಳಾ ಸಹಕಾರಿ ಸಂಸ್ಥೆಗಳಿಗೆ 'ನಂದಿನಿ ಸಹಕಾರಿ' ಇತ್ಯಾದಿ. 2022-23ರ ಹಣಕಾಸು ವರ್ಷದಲ್ಲಿ ಎನ್ಸಿಡಿಸಿ 41,025 ಕೋಟಿ ರೂ.ಗಳ (ತಾತ್ಕಾಲಿಕ) ಆರ್ಥಿಕ ಸಹಾಯವನ್ನು ವಿತರಿಸಿದೆ, ಇದು 2021-22ರಲ್ಲಿ 34,221 ಕೋಟಿ ರೂ.ಗಳ ವಿತರಣೆಗಿಂತ ಸುಮಾರು 20% ಹೆಚ್ಚಾಗಿದೆ. ಸಹಕಾರಿ ಕ್ಷೇತ್ರಕ್ಕೆ ಅತ್ಯಗತ್ಯವಾಗಿರುವ ಹಣದ ಹರಿವನ್ನು ಹೆಚ್ಚಿಸಲು, ಎನ್ಸಿಡಿಸಿ ತನ್ನ ದಕ್ಷತೆ ಮತ್ತು ಭೌಗೋಳಿಕ ವ್ಯಾಪ್ತಿಯನ್ನು ಹೆಚ್ಚಿಸುವ ಮೂಲಕ ಮುಂದಿನ ಐದು ವರ್ಷಗಳಲ್ಲಿ ಸಾಲ ವಿತರಣೆಯನ್ನು ವರ್ಷಕ್ಕೆ ಸುಮಾರು 3 ಲಕ್ಷ ಕೋಟಿ ರೂ.ಗೆ ಹೆಚ್ಚಿಸಲು ಉದ್ದೇಶಿಸಿದೆ. ಎಲ್ಲಾ ರಾಜ್ಯಗಳು ಮತ್ತು ರಾಜ್ಯ ಸಹಕಾರಿ ಸಂಘಗಳು ಎನ್ಸಿಡಿಸಿಯ ಸಾಲ ಯೋಜನೆಗಳನ್ನು ಪಡೆಯಬಹುದು.

## (ಜೆ) ಕೇಂದ್ರ ರಿಜಿಸ್ಟ್ರಾರ್ ಕಚೇರಿ ಬಲವರ್ಧನೆ

### 41. ಕೇಂದ್ರೀಯ ರಿಜಿಸ್ಟ್ರಾರ್ ಕಚೇರಿಯ ಗಣಕೀಕರಣ

ಕೇಂದ್ರೀಯ ರಿಜಿಸ್ಟ್ರಾರ್ ಕಚೇರಿಯು ಬಹು ರಾಜ್ಯ ಸಹಕಾರಿ ಸಂಘಗಳ (ಎಂಎಸ್ಸಿಎಸ್) ಕಾಯ್ದೆ, 2002 ರ ನಿರ್ವಹಣೆಯ ಜವಾಬ್ದಾರಿಯನ್ನು ಹೊಂದಿದೆ. ಬಹು ರಾಜ್ಯ ಸಹಕಾರಿ ಸಂಘಗಳಿಗೆ ಡಿಜಿಟಲ್ ಪರಿಸರ ವ್ಯವಸ್ಥೆಯನ್ನು ರಚಿಸಲು ಕೇಂದ್ರೀಯ ರಿಜಿಸ್ಟ್ರಾರ್ ಕಚೇರಿಯನ್ನು ಗಣಕೀಕರಣಗೊಳಿಸಲಾಗುತ್ತಿದೆ. ಕೇಂದ್ರೀಯ ರಿಜಿಸ್ಟ್ರಾರ್ ಕಚೇರಿಯಲ್ಲಿ ಎಲೆಕ್ಟ್ರಾನಿಕ್ ಕೆಲಸದ ಹರಿವಿನ ಮೂಲಕ ಅರ್ಜಿಗಳು ಮತ್ತು ಸೇವಾ ವಿನಂತಿಗಳನ್ನು ಕಾಲಮಿತಿಯೊಳಗೆ ನಿರ್ವಹಿಸಲು ತಂತ್ರಾಂಶವು (ಸಾಫ್ಟ್ವೇರ್) ಸಹಾಯ ಮಾಡುತ್ತದೆ. ಇದು ಒಟಿಪಿ ಆಧಾರಿತ ಬಳಕೆದಾರ ನೋಂದಣಿ, ಎಂಎಸ್ಸಿಎಸ್ ಕಾಯ್ದೆ ಮತ್ತು ನಿಯಮಗಳ ಅನುಸರಣೆಗಾಗಿ ವಿದ್ಯುನ್ಮಾನವಾಗಿ ಪರಿಶೀಲನೆ, ವಿಸಿ ಮೂಲಕ ವಿಚಾರಣೆ, ನೋಂದಣಿ ಪ್ರಮಾಣಪತ್ರ ವಿತರಣೆ ಮತ್ತು ಇತರ ಸಂವಹನವದ ನಿರ್ವಹಣೆಯ ಅನುಕೂಲತೆಯನ್ನು ಹೊಂದಿರುತ್ತದೆ.  ಈ ಗಣಕೀಕರಣ ಯೋಜನೆಯು ಹೊಸ ಎಂಎಸ್ ಸಿಎಸ್ ಗಳನ್ನು ನೋಂದಾಯಿಸಲು ಗಮನಾರ್ಹವಾಗಿ ಸಹಾಯ ಮಾಡುತ್ತದೆ ಮತ್ತು ಅವರ ವ್ಯವಹಾರವನ್ನು ಸುಲಭಗೊಳಿಸುತ್ತದೆ.

### 42. ಬಹು ರಾಜ್ಯ ಸಹಕಾರಿ ಸಂಘಗಳ (ತಿದ್ದುಪಡಿ) ಮಸೂದೆ, 2022

2022ರ ಬಹು ರಾಜ್ಯ ಸಹಕಾರಿ ಸಂಘಗಳ (ತಿದ್ದುಪಡಿ) ಮಸೂದೆಯು ಬಹು ರಾಜ್ಯ ಸಹಕಾರಿ ಸಂಘಗಳ ಅಧಿನಿಯಮ, 2022 ಅನ್ನು  ತಿದ್ದುಪಡಿ ಮಾಡುವ ಗುರಿ ಹೊಂದಿದೆ. ಬಹು-ರಾಜ್ಯ ಸಹಕಾರಿ ಸಂಘಗಳ ಅಧಿನಿಯಮದಲ್ಲಿ ಸಂವಿಧಾನದ 97ನೇ ತಿದ್ದುಪಡಿಯ ಉಪಬಂಧಗಳನ್ನು  ಸೇರಿಸಲು ಮತ್ತು ಬಹು-ರಾಜ್ಯ ಸಹಕಾರಿ ಸಂಘಗಳಲ್ಲಿ ಆಡಳಿತವನ್ನು ಬಲಪಡಿಸುವುದು, ಪಾರದರ್ಶಕತೆಯನ್ನು ಹೆಚ್ಚಿಸುವುದು, ಉತ್ತರದಾಯಿತ್ವವನ್ನು ಹೆಚ್ಚಿಸುವುದು, ಚುನಾವಣಾ ಪ್ರಕ್ರಿಯೆಯನ್ನು ಸುಧಾರಿಸುವುದು, ಇತ್ಯಾದಿ ಈ ಮಸೂದೆಯ ಉದ್ದೇಶ. ಈ ಮಸೂದೆಯನ್ನು 2022 ರ ಡಿಸೆಂಬರ್ 7 ರಂದು ಲೋಕಸಭೆಯಲ್ಲಿ ಮಂಡಿಸಲಾಯಿತು ಮತ್ತು ಡಿಸೆಂಬರ್ 20, 2022 ರಂದು ಉಭಯ ಸದನಗಳ ಜಂಟಿ ಸಂಸದೀಯ ಸಮಿತಿಗೆ ಕಳುಹಿಸಲಾಯಿತು. ಜಂಟಿ ಸಮಿತಿಯು ವರದಿ ಮಾಡಿದಂತೆ ಮಸೂದೆಯನ್ನು ಪರಿಗಣನೆಗೆ ತೆಗೆದುಕೊಳ್ಳುವ ಮತ್ತು ಅಂಗೀಕರಿಸುವ ಸೂಚನೆಯನ್ನು 22.03.2023 ರಂದು ಲೋಕಸಭೆಯಲ್ಲಿ ನೀಡಲಾಗಿದೆ. ಸಂಸತ್ತಿನ

ಮುಂಬರುವ ಅಧಿವೇಶನದಲ್ಲಿ ಮಸೂದೆಯನ್ನು ಪರಿಗಣನೆಗೆ ಮತ್ತು ಅಂಗೀಕಾರಕ್ಕೆ ಮಂಡಿಸಲಾಗುವುದು.

**(ಕೆ) ಇತರ ಉಪಕ್ರಮಗಳು**

### 43. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳ (ಎ.ಆರ್.ಡಿ.ಬಿ. ಗಳ) ಗಣಕೀಕರಣ

ದೀರ್ಘಕಾಲೀನ ಸಹಕಾರಿ ಸಾಲ ರಚನೆಯನ್ನು ಬಲಪಡಿಸಲು, ಸಚಿವಾಲಯ ಸಹಕಾರವು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳ (ಎ.ಆರ್.ಡಿ.ಬಿ. ಗಳ) ಗಣಕೀಕರಣ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಇದು ಯಂತ್ರಾಂಶ (ಹಾರ್ಡ್ ವೇರ್) ಸಂಗ್ರಹಣೆ, ಸಮಗ್ರ ಉದ್ಯಮ ಸಂಪನ್ಮೂಲ ಯೋಜನೆ (ಇಆರ್ ಪಿ) ಪರಿಹಾರಗಳು, ಅಂಕೀಕರಣ (digitalisation), ತರಬೇತಿ ಮತ್ತು ಬೆಂಬಲ ನೀಡಿಕೆ ಮತ್ತು ತಂತ್ರಾಂಶ (ಸಾಫ್ಟ್ ವೇರ್) ನಿರ್ವಹಣೆ ಮುಂತಾದ ವಿವಿಧ ಘಟಕಗಳನ್ನು ಹೊಂದಿರುತ್ತದೆ. ಈ ಯೋಜನೆಯಲ್ಲಿ ಮಾಡಿದ ವೆಚ್ಚದ 25 ಪ್ರತಿಶತವನ್ನು ಎಆರ್ಡಿಬಿಗಳು ಮತ್ತು ಉಳಿದ 75 ಪ್ರತಿಶತವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಭರಿಸುತ್ತವೆ. ಗಣಕೀಕರಣವು ಎಆರ್ಡಿಬಿಗಳಿಗೆ ಹೆಚ್ಚಿದ ದಕ್ಷತೆ, ತ್ವರಿತ ಸಾಲ ವಿತರಣೆ, ಕಡಿಮೆ ವಹಿವಾಟು ವೆಚ್ಚಗಳು, ಹೆಚ್ಚಿದ ಪಾರದರ್ಶಕತೆ ಮತ್ತು ಪಾವತಿಗಳ ಕಡಿಮೆ ಅಸಮತೋಲನ ಮುಂತಾದ ವಿವಿಧ ಪ್ರಯೋಜನಗಳನ್ನು ಒದಗಿಸುತ್ತದೆ.

### 44. ಸಹಾರಾ ಗ್ರೂಪ್ ಆಫ್ ಸೊಸೈಟಿಗಳ ಹೂಡಿಕೆದಾರರಿಗೆ ಮರುಪಾವತಿ

ಸಹಕಾರ ಸಚಿವಾಲಯದ ಅರ್ಜಿಯ ಮೇರೆಗೆ, ಘನ ಸರ್ವೋಚ್ಚ ನ್ಯಾಯಾಲಯವು 29.03.2023 ರ ಆದೇಶದ ಮೂಲಕ ಸಹಾರಾ ಗುಂಪಿನ 4 ಸಹಕಾರಿ ಸಂಘಗಳ (ಸಹಾರಾ ಪತ್ತಿನ ಸಹಕಾರ ಸಂಘ ನಿಯಮಿತ, ಸಹಾರಾಯಾನ್ ಯೂನಿವರ್ಸಲ್ ವಿವಿಧೋದ್ದೇಶ ಸಂಘ ನಿಯಮಿತ, ಹಮಾರಾ ಇಂಡಿಯಾ ಪತ್ತಿನ ಸಹಕಾರ ಸಂಘ ನಿಯಮಿತ ಮತ್ತು ಸ್ಟಾರ್ಸ್ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ) ಠೇವಣಿದಾರರ ಸಿಂಧುವಾದ ಬಾಕಿಗಳನ್ನು (valid dues) ವಿತರಿಸಲು ಸಹಾರಾ-ಸೆಬಿ ಹಿಂಪಾವತಿ ಖಾತೆಯಿಂದ 5000 ಕೋಟಿ ರೂ.ಗಳನ್ನು ಬಹು-ರಾಜ್ಯ ಸಹಕಾರಿ

ಸಂಘಗಳ ಕೇಂದ್ರೀಯ ರಿಜಿಸ್ಟ್ರಾರ್ ಗೆ ವರ್ಗಾಯಿಸಲು ನಿರ್ದೇಶಿಸಿದೆ. ಘನ ಸರ್ವೋಚ್ಚ ನ್ಯಾಯಾಲಯದ ಆದೇಶಕ್ಕನುಸಾರವಾಗಿ ಕೇಂದ್ರೀಯ ರಿಜಿಸ್ಟ್ರಾರ್ ಪಾವತಿ ಮಾಡಲು ಅನುವಾಗುವಂತೆ ಪಾರದರ್ಶಕ ಡಿಜಿಟಲ್ ವ್ಯವಸ್ಥೆಯನ್ನು (ಪೋರ್ಟಲ್) ಅಭಿವೃದ್ಧಿಪಡಿಸಲು ನ್ಯಾಯಮೂರ್ತಿ ಶ್ರೀ ಆರ್ ಸುಭಾಷ್ ರೆಡ್ಡಿ (ನಿವೃತ್ತ) ಮತ್ತು ಅಮಿಕಸ್ ಕ್ಯೂರಿ ವಕೀಲ ಶ್ರೀ ಗೌರವ್ ಅಗರ್ವಾಲ್ ಅವರ ಮೇಲ್ವಿಚಾರಣೆಯಲ್ಲಿ ಸ್ಟಾಕ್ ಹೋಲ್ಡಿಂಗ್ ಡಾಕ್ಯುಮೆಂಟ್ಸ್ ಮ್ಯಾನೇಜ್ಮೆಂಟ್ ಸರ್ವೀಸಸ್ ಲಿಮಿಟೆಡ್ (ಎಸ್ಡಿಎಂಎಸ್ಎಲ್) ಸಂಸ್ಥೆಯನ್ನು ತೊಡಗಿಸಲಾಗಿದೆ. ಮರುಪಾವತಿ ಪ್ರಕ್ರಿಯೆಯ ಮೇಲ್ವಿಚಾರಣೆಗಾಗಿ ಮೇಲಿನ ಪ್ರತಿಯೊಂದು ಸಮಿತಿಗೆ ಕೇಂದ್ರೀಯ ರಿಜಿಸ್ಟ್ರಾರ್ ನಾಲ್ಕು ವಿಶೇಷ ಕರ್ತವ್ಯ ಅಧಿಕಾರಿಗಳನ್ನು (ಒಎಸ್ಡಿ) ನೇಮಿಸಿದ್ದಾರೆ. ಠೇವಣಿಗಳು ಮತ್ತು ಹಕ್ಕುಗಳ ಸರಿಯಾದ ಗುರುತಿಸುವಿಕೆ ಮತ್ತು ಪುರಾವೆಗಳನ್ನು ಸಲ್ಲಿಸಿದ ನಂತರ ಪಾರದರ್ಶಕ ರೀತಿಯಲ್ಲಿ ಪೋರ್ಟಲ್ ಮೂಲಕ, ನ್ಯಾಯಯುತ ಠೇವಣಿದಾರರ ಸಂಬಂಧಿತ ಬ್ಯಾಂಕ್ ಖಾತೆಗೆ ಪಾವತಿ ಮಾಡಲಾಗುತ್ತದೆ. ಪೋರ್ಟಲ್ ಮೂಲಕ ಮರುಪಾವತಿಗೆ ಅರ್ಜಿ ಸಲ್ಲಿಸುವಂತೆ ಈ ಸಂಘಗಳ ಹೂಡಿಕೆದಾರರಿಗೆ ತಿಳಿಸಲು ಕೇಂದ್ರ ರಿಜಿಸ್ಟ್ರಾರ್ ಕಚೇರಿ ಶೀಘ್ರದಲ್ಲೇ ಪತ್ರಿಕಾ ಪ್ರಕಟಣೆ ಹೊರಡಿಸಲಿದೆ.

**45.ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳಲ್ಲಿನ ಸಹಕಾರ ಸಂಘಗಳ ರಿಜಿಸ್ಟ್ರಾರ್ ಕಚೇರಿಯನ್ನು ಗಣಕೀಕರಣಗೊಳಿಸುವ ಯೋಜನೆ**

ಸಹಕಾರಿ ಸಂಘಗಳಿಗೆ ವ್ಯವಹಾರವನ್ನು ಸುಲಭಗೊಳಿಸಲು ಮತ್ತು ಎಲ್ಲಾ ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳಲ್ಲಿ ಪಾರದರ್ಶಕ ಕಾಗದರಹಿತ ನಿಯಮನಕ್ಕಾಗಿ (regulation) ಡಿಜಿಟಲ್ ಪರಿಸರ ವ್ಯವಸ್ಥೆಯನ್ನು ರಚಿಸಲು, ಸಹಕಾರ ಸಚಿವಾಲಯವು ರಾಜ್ಯ ರಿಜಿಸ್ಟ್ರಾರ್ ಕಚೇರಿಗಳ ಗಣಕೀಕರಣಕ್ಕೆ ಯೋಜನೆಯನ್ನು ಸಿದ್ಧಪಡಿಸುತ್ತಿದೆ. ಈ ಯೋಜನೆಯಡಿ ಅಭಿವೃದ್ಧಿಪಡಿಸಲಾದ ತಂತ್ರಾಂಶವು (ಸಾಫ್ಟ್ವೇರ್) ಆಯಾ ರಾಜ್ಯ / ಕೇಂದ್ರಾಡಳಿತ ಪ್ರದೇಶದ ಸಹಕಾರ ಕಾಯ್ದೆಯನ್ನು ಆಧರಿಸಿರುತ್ತದೆ. ಈ ಯೋಜನೆಯನ್ನು ರೂಪಿಸಲು ಸಚಿವಾಲಯವು ಎಲ್ಲಾ ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳ

ರಿಜಿಸ್ಟ್ರಾರುಗಳೊಂದಿಗೆ ಮಾತುಕತೆ ನಡೆಸುತ್ತಿದೆ ಮತ್ತು ಶೀಘ್ರದಲ್ಲೇ ಇದನ್ನು ಕೇಂದ್ರ ಪ್ರಾಯೋಜಿತ ಯೋಜನೆಯಾಗಿ ಪ್ರಸ್ತಾಪಿಸಲಾಗುವುದು.

***